ಉ) ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಲಿಖಿತ ಪರೀಕ್ಷೆಯನ್ನು 1997ರ ಅಕ್ಟೋಬರ್-ನವೆಂಬರ್ ತಿಂಗಳಿನಲ್ಲಿ ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ 1998ರ ಜನವರಿ - ಫೆಬ್ರವರಿ ತಿಂಗಳಿನಲ್ಲಿ ನಡೆಸಲು ಉದ್ದೇಶಿಸಿದೆ.

ಬೆಂಗಳೂರು ಕಲಾ ಆಯೋಗವು ಘೋಷಿಸಿರುವ ಹೆರಿಟೇಜ್ ಕಟ್ಟಡಗಳು.

2106 - ಶ್ರೀ ರಾಮಲಿಂಗಾರೆಡ್ಡಿ, (ಜಯನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿ ಯಾವ ಯಾವ ಹಳೆಯ ಕಟ್ಟಡಗಳನ್ನು ಹೆರಿಟೇಜ್ ಕಟ್ಟಡಗಳೆಂದು ಬೆಂಗಳೂರು ಕಲಾ ಆಯೋಗವು ಘೋಷಿಸಿದೆ.*

ಆ) *ಎಷ್ಟು ಹೆರಿಟೇಜ್ ಕಟ್ಟಡಗಳನ್ನು ಕೆಡವಿ ಹೊಸ ಕಟ್ಟಡ ಕಟ್ಟಲಾಗಿದೆ.*

ಇ) *ಎಷ್ಟು ಹೆರಿಟೇಜ್ ಕಟ್ಟಡಗಳಲ್ಲಿ ಒಂದು ಭಾಗವನ್ನು ಮಾತ್ರ ಕೆಡವಿ ಕಟ್ಟಡ ಅಥವಾ ವಾಣಿಜ್ಯ ಸಂಕೀರ್ಣ ನಿರ್ಮಿಸಲಾಗಿದೆ.*

ಈ) *ಈ ರೀತಿ ಹೆರಿಟೇಜ್ ಕಟ್ಟಡಗಳನ್ನು ಕೆಡವಲು ಬೆಂಗಳೂರು ಕಲಾ ಆಯೋಗವು ಶಿಪಾರಸ್ಸು ಮಾಡಿತ್ತೇ?*

ಉ) *ಇಲ್ಲದಿದ್ದಲ್ಲಿ ಈ ಆಯೋಗವು ಶಿಫಾರಸನ್ನು ಉಲ್ಲಂಘಿಸಿ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧೀಕಾರ ನಕ್ಷೆ ಮಂಜೂರು ಮಾಡಿದೆಯೇ?*

ಊ) *ಹಾಗಿದ್ದಲ್ಲಿ ಈ ಕಲಾ ಆಯೋಗದ ಅವಶ್ಯಕತೆ ಇದೆಯೇ?*

ಶ್ರೀ ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ಸಚಿವರು) :

ಅ) ಬೆಂಗಳೂರು ಕಲಾ ಆಯೋಗವು ಯಾವುದೇ ಹಳೆ ಕಟ್ಟಡವನ್ನು ಹೆರಿಟೇಜ್ ಕಟ್ಟಡಗಳೆಂದು ಘೋಷಿಸಿರುವುದಿಲ್ಲ. ಈ ವಿಷಯವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧ ಪಟ್ಟಿರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಬೆಂಗಳೂರು ಕಲಾ ಆಯೋಗದ ಅವಶ್ಯಕತೆ ಇದೆ.